# 8

# ಪ್ರಶ್ನೆ:

# “ಸಭಾಪಂಗಡವಾಗಿರುವುದು ಅಪಮಾನಕರವಾದದ್ದು ಆಗಿದ್ದರೆ, ವಿಶ್ವಾಸಿಗಳು ಐಕ್ಯತೆಯಲ್ಲಿ ಇರುವುದು ಹೇಗೆ?”

## ಉತ್ತರ:

ಕ್ರಿಸ್ತನಲ್ಲಿ ನಂಬಿಕೆಯಿಡುವವರು ನೂರಾರು ಸಭೆಗಳಾಗಿ ಮುರಿದು ಹೋಗಿದ್ದಾರೆ. ಟೂತ್‌ಪೇಸ್ಟ್ ಬ್ರಾಂಡುಗಳು ಇರುವಂತೆಯೇ ಕ್ರೈಸ್ತತ್ವದ ಬ್ರಾಂಡುಗಳೂ ಅಸ್ತಿತ್ವದಲ್ಲಿರುತ್ತವೆ!

ಧಾರ್ಮಿಕ ವಿಭಜನೆಯ ಮೇಲೆ ವಿರೋಧ, ಹೋರಾಟಗಳಿಂದ ಕ್ರಿಸ್ತನಲ್ಲಿಯ ವಿಶ್ವಾಸಿಗಳು ಬೇರೆ ಬೇರೆಯಾಗಿ ಹರಿದು ಹೋಗಿದ್ದರಿಂದ ಸಭಾಪಂಗಡವಾಗಿರುವಿಕೆಯು ಅಪಮಾನಕರವಾದದ್ದಾಗಿದೇ ಎಂದು ನಾವು ನಂಬುತ್ತೇವೆ. ಎರಡನೆಯದು, ಕ್ರೈಸ್ತತ್ವವನ್ನು ಸ್ವೀಕರಿಸುವದರಿಂದ ಜನರನ್ನು ದೂರವಿಡುವದರಿಂದ ಅಪಮಾನಕರವಾದದ್ದಾಗಿದೆ. ಭಿನ್ನವಾದ ತತ್ವವನ್ನು ಬೋಧಿಸುತ್ತ, ಮೂರು ಜನ ಮಿಶನರಿಗಳು ಒಂದು ಆಫ್ರಿಕನ್ ಬುಡಕಟ್ಟು ಜನಾಂಗವನ್ನು ಸಂದರ್ಶಿಸಿದರು. ಮೂರು ತಿಂಗಳಾದರೂ, ಅಲ್ಲಿ ಯಾರು ಮಾರ್ಪಾಟು ಹೊಂದಲಿಲ್ಲ. ಏನು ತಪ್ಪಾಗಿದೆಯೆಂದು ಕಂಡುಕೊಳ್ಳಲು ಜನಾಂಗದ ಮುಖ್ಯಸ್ಥನನ್ನು ಈ ಮೂವರು ಸಂದರ್ಶಿಸಿದರು. ಅವರ ದೂರನ್ನು ಮುಖ್ಯಸ್ಥನು ಕೇಳಿ ಹೀಗೆ ಉತ್ತರ ಕೊಟ್ಟನು, “ಯೇಸುವಿನ ಬಗ್ಗೆ ನೀವು ನಮಗೆ ಬೋಧಿಸಬೇಕು, ಆದರೆ ನೀವೆಲ್ಲರೂ ಭಿನ್ನವಾದ ಸಂಗತಿಗಳನ್ನು ಬೋಧಿಸುತ್ತೀರಿ. ಮೊದಲು, ಒಂದಾಗಿ ಕೂಡಿರಿ ಮತ್ತು ಈ ಯೇಸು ಏನು ಬೋಧಿಸುತ್ತಾನೆ ಎಂಬುದನ್ನು ನಿರ್ಣಯಿಸಿಕೊಳ್ಳಿರಿ. ಆ ಮೇಲೆ ಬಹುಶಃ ನಿಮ್ಮ ಬೋಧನೆಗೆ ಕಿವಿಗೊಡುವೆವು ಮತ್ತು ನೀವು ಹೇಳುವದನ್ನು ಮಾಡುವೆವು.” ಕ್ರಿಸ್ತನನ್ನು ಹಿಂಬಾಲಿಸುತ್ತೇವೆ ಎಂದು ಹೇಳಿಕೊಳ್ಳುವದರಲ್ಲಿ ಧಾರ್ಮಿಕ ವಿಭಜನೆಯಿರುವ ಕಾರಣದಿಂದ ಅನೇಕರು ಕ್ರಿಸ್ತನನ್ನು ಹಿಂಬಾಲಿಸುವುದನ್ನು ನಿರಾಕರಿಸಿದ್ದಾರೆ. “ವಿಭಾಗವಾದ ಕ್ರೈಸ್ತತ್ವಕ್ಕಾಗಿ ನಾವು ಕೊಟ್ಟ ಕ್ರಯವು ನಂಬಿಕೆಯಿಡದ ಜಗತ್ತು ಆಗಿದೆ” ಎಂದು ಯಾರೋ ಒಬ್ಬರು ಹೇಳಿದ್ದಾರೆ.

ಸಭಾಪಂಗಡವಿರುವುದು ಅಪಮಾನಕರವಾದದ್ದು ಯಾಕೆ ಎಂಬುದಕ್ಕೆ ಮುಖ್ಯಕಾರಣವು ಅದು ದೇವರ ಚಿತ್ತಕ್ಕೆ ವಿರುದ್ಧವಾದದ್ದಾಗಿದೆ: “ಇವರಿಗೋಸ್ಕರ ಮಾತ್ರವಲ್ಲದೆ ಇವರ ವಾಕ್ಯದಿಂದ ನನ್ನನ್ನು ನಂಬುವವರಿಗೋಸ್ಕರ ಸಹ ಕೇಳಿಕೊ

ಳ್ಳುತ್ತೇನೆ. ನೀನು ನನ್ನನ್ನು ಕಳುಹಿಸಿಕೊಟ್ಟಿದ್ದೀ ಎಂದು ಲೋಕವು ನಂಬುವದಕ್ಕಾಗಿ ಅವರೆಲ್ಲರೂ ಒಂದಾಗಿರಬೇಕೆಂತಲೂ ತಂದೆಯೇ; ನೀನು ನನ್ನಲ್ಲಿಯೂ ನಾನು ನಿನ್ನಲ್ಲಿಯೂ ಇರುವ ಪ್ರಕಾರ ಅವರೂ ನಮ್ಮಲ್ಲಿ ಇರಬೇಕೆಂತಲೂ ಕೇಳಿಕೊಳ್ಳುತ್ತೇನೆ" (ಯೋಹಾನ 17:20, 21) ಎಂದು ಯೇಸು ಪ್ರಾರ್ಥಿಸಿದನು: "ಸಹೋದರರೇ, ನಿಮ್ಮೆಲ್ಲರ ಮಾತು ಒಂದೇ ಆಗಿರಬೇಕು; ನಿಮ್ಮಲ್ಲಿ ಭೇದಗಳಿರಬಾರದು, ನೀವು ಒಂದೇ ಮನಸ್ಸೂ ಒಂದೇ ಅಭಿಪ್ರಾಯ ಉಳ್ಳವರಾಗಿದ್ದು ಹೊಂದಿಕೆಯಿಂದಿರಬೇಕು ಎಂಬುದಾಗಿ ನಾನು ನಮ್ಮ ಕರ್ತನಾದ ಯೇಸುಕ್ರಿಸ್ತನ ಹೆಸರಿನಲ್ಲಿ ನಿಮ್ಮನ್ನು ಬೇಡಿಕೊಳ್ಳುತ್ತೇನೆ" ಎಂದು ಪೌಲನು ಬರೆದನು (1 ಕೊರಿಂಥ 1:10).

ಸಭಾಪಂಗಡವಿರುವುದು ಅಪಮಾನಕರವಾದದ್ದಾಗಿದೆ ಎಂದು ನಾವು ಒಪ್ಪಿಕೊಂಡರೂ ಈ ಪ್ರಶ್ನೆ ಉಳಿಯುತ್ತದೆ: *ವಿಶ್ವಾಸಿಗಳು ಕ್ರಿಸ್ತನಲ್ಲಿ ಹೇಗೆ ಒಂದಾಗಿರಬೇಕು?* ಐಕ್ಯತೆಗೆ ಎರಡು ಮಾರ್ಗಗಳ ವ್ಯತ್ಯಾಸಗಳನ್ನು ನೋಡೋಣ.

## ಮನುಷ್ಯನಿಂದ ಉಪಯೋಗಿಸಲ್ಪಟ್ಟ ಮಾರ್ಗ

ಎರಡು ಮಾರ್ಗಗಳಲ್ಲಿ ಒಂದನ್ನು ಜನರು ಐಕ್ಯತೆಯನ್ನು ಸಾಧಿಸಲು ಹುಡುಕಿದ್ದಾರೆ. ಒಂದು ಮಾರ್ಗವು ಪರಸ್ಪರ *ಸಹಕಾರದ ಮುಖಾಂತರ ಐಕ್ಯತೆಯ ತತ್ವ.* ಭಿನ್ನವಾದ ತತ್ವಗಳನ್ನು ಹಿಡಿದುಕೊಂಡಿರುವ ಜನರು ಭಿನ್ನವಾದ ಸಭಾಪಂಗಡಗಳ ಭಾಗವಾಗಿರುವವರು ಒಪ್ಪಿಕೊಳ್ಳದಿರುವಿಕೆಯನ್ನು ಒಪ್ಪಿಕೊಂಡಿದ್ದಾರೆ. ಅವರು ತಾವು ಒಪ್ಪಿಕೊಳ್ಳದ ವಿಷಯಗಳನ್ನು ಕಡೆಗಣಿಸಿ ಎಲ್ಲರೂ ಸಾಮೂಹಿಕವಾಗಿ ಒಪ್ಪಿಕೊಂಡಿರುವ ವಿಷಯಗಳನ್ನು ಒತ್ತಿ ಹೇಳುತ್ತಾರೆ.

ಕೆಲವು ಸಲ ಈ ಮನೋಭಾವನೆಯೊಂದಿಗೆ ಜನರು ಸಾಮಾನ್ಯ ಪ್ರಾರ್ಥನಾ ಗುಂಪುಗಳಲ್ಲಿ ಮತ್ತು ಬೈಬಲ್ ಅಧ್ಯಯನ ಗುಂಪುಗಳಲ್ಲಿ ಕೂಡಿಬರುತ್ತಾರೆ. ಅನೇಕ ವಿಷಯಗಳ ಮೇಲೆ ಅವರು ಒಪ್ಪಿಕೊಳ್ಳುವದಿಲ್ಲ ಎಂಬುದನ್ನು ಕಡೆಗಣಿಸುವರು ಮತ್ತು ಎಲ್ಲರೂ ನಂಬುವ ತತ್ವಗಳನ್ನು ಚರ್ಚಿಸುವರು. ಇಲ್ಲವೇ ಅವರು ಇಂಟರ್ ಡಿನೊಮಿನೇಶನಲ್ ಸಭೆಯನ್ನು ರಚಿಸುವರು. ಅದರಲ್ಲಿ ಬಾಪ್ತಿಸ್ಮ, ಕರ್ತನ ಭೋಜನ, ಸಭೆಯ ಆಡಳಿತೆ ಇತ್ಯಾದಿಗಳ ಬಗ್ಗೆ ಭಿನ್ನವಾದ ಅಭಿಪ್ರಾಯಗಳುಳ್ಳ ಜನರು ಇರುವರು.

ಹೆಚ್ಚಿನ ಅಳತೆಯಲ್ಲಿ ಅದೇ ವಿಧಾನವು ಕೆಲವು ಸಭೆಗಳಲ್ಲಿಯ ಸಹಕಾರಿ ಪ್ರಯತ್ನಗಳಲ್ಲಿ ಕಾಣಬಹುದು. ಎಲ್ಲರೂ ಆಸಕ್ತಿವಹಿಸಿದ ಯೋಜನೆಗಳನ್ನು ಕೈಕೊಳ್ಳುವಲ್ಲಿ ಸಭೆಗಳು ತಮ್ಮ ಭಿನ್ನತೆಗಳನ್ನು ಮರೆತು ಬಿಡುವವು. ಇಲ್ಲವೇ ಸಭಾಪಂಗಡಗಳು ಚರ್ಚುಗಳ ಕೌನ್ಸಿಲುಗಳಲ್ಲಿ ಒಂದಾಗಿ ಕೂಡಿಬರುವವು. ಈ ಕೌನ್ಸಿಲುಗಳಲ್ಲಿ, ಪ್ರತಿಯೊಂದು ಸಭೆಯು ಸಾಮಾಜಿಕ ಕಾರ್ಯ ಇಲ್ಲವೇ ಸಹಾಯದ ಮತ್ತು ಸುವಾರ್ತಾ ಸೇವೆಯ ಕಾರ್ಯಗಳಲ್ಲಿ ಒಂದಾಗಿ ಸಹಕರಿಸುವಾಗ, ತನ್ನ ಸ್ವಂತ ನಂಬಿಕೆಗಳಿಗೆ ಅಂಟಿಕೊಂಡಿರುವುದು.

ಈ ವಿಧಾನದೊಂದಿಗೆ ಏನಾದರೂ ತಪ್ಪು ಇರುವುದೋ? ಅದಕ್ಕೆ ನಿಶ್ಚಿತವಾದ ಮನವಿಯಿದೆ: ಇತರ ನಂಬಿಕೆಗಳೊಂದಿಗೆ ಸಹಿಸಿಕೊಳ್ಳುವ ಮತ್ತು ಇತರರೊಂದಿಗೆ ಸಹಕರಿಸುವ ಜನರನ್ನು ನಾವು ಗೌರವಿಸುತ್ತೇವೆ. ಅದು ಕ್ರೈಸ್ತ ಮನೋಭಾವನೆಗಳನ್ನು ಪ್ರದರ್ಶಿಸುವಂತೆಯೂ ತೋರುತ್ತದೆ.

ನಿಜವಾಗಿಯೂ ಯಾವುದನ್ನೂ ಪರಿಹರಿಸದ ಪರಿಹಾರವು ಅದಾಗಿರುವುದು ಸಮಸ್ಯೆಯಾಗಿದೆ. ಅದು ನಿಜವಾದ ಐಕ್ಯತೆಯನ್ನು ಹುಟ್ಟಿಸುವದಿಲ್ಲ. ಈ ವಿಧಾನವನ್ನು ತೆಗೆದುಕೊಳ್ಳುವುದು ಚಾಪೆಯ ಕೆಳಗೆ ಸಮಸ್ಯೆಯನ್ನು ಗುಡಿಸುವದಕ್ಕೆ ಸಮಾನವಾಗಿದೆ.

ಅದು ಕಣ್ಣಿಗೆ ಮರೆಯಾಗಬಹುದು, ಆದರೆ ಇದು ಇನ್ನೂ ಅಲ್ಲಿರುತ್ತದೆ. ನಮ್ಮ ವಿಭಾಗವು ಏನೂ ಮಾಡದೆಂದು ನಾವು ನಟಿಸಿದರೂ, ನಾವು ಇನ್ನೂ ವಿಭಾಗವಾಗಿಯೆ ಇದ್ದೇವೇ, ಮತ್ತು ಸಭಾಪಂಗಡತೆಯ ಅನಿಷ್ಟಗಳು ಇನ್ನೂ ಅಸ್ತಿತ್ವದಲ್ಲಿ ಇರುತ್ತವೆ.

ಹೆಚ್ಚು ಮಹತ್ವದ್ದು, ಈ ವಿಧಾನವು ಬೈಬಲಿನಲ್ಲಿ ವಿವರಿಸಲ್ಪಟ್ಟ ಐಕ್ಯತೆಯ ರೀತಿ ಯಲ್ಲಿ ಪರಿಣಾಮಗೊಳ್ಳದ್ದರಿಂದ ತಪ್ಪಾಗಿರುತ್ತದೆ. "ತಂದೆಯೇ, ನೀನು ನನ್ನಲ್ಲಿಯೂ ನಾನು ನಿನ್ನಲ್ಲಿಯೂ ಇರುವ ಪ್ರಕಾರ" (ಯೋಹಾನ 17:21) ವಿಶ್ವಾಸಿಗಳು ಒಂದಾಗಗಿರ ಬೇಕೆಂದು ನಮ್ಮ ಕರ್ತನು ಪ್ರಾರ್ಥಿಸಿದನು. ತಂದೆಯೂ ಮತ್ತು ಕುಮಾರನೂ ಎಷ್ಟು ನಿಕಟತೆಯಲ್ಲಿರುವರಲ್ಲವೇ? ಅವರು ಉದ್ದೇಶದಲ್ಲಿ, ಯೋಜನೆಯಲ್ಲಿ ಮತ್ತು ಬಲದಲ್ಲಿ ಹೇಗೆ ಒಂದಾಗಿದ್ದಾರೆಂಬುದನ್ನು ಯೋಚಿಸಿರಿ. ಸಭಾಪಂಗಡ ಗುಂಪುಗಳ ಸಹಕಾರದ ಮುಖಾಂತರ ಆ ರೀತಿಯ ಒಂದಾಗಿರುವಿಕೆಯು ಸಾಧಿಸಲ್ಪಡುವುದೋ? ಇಲ್ಲವೇ ಇಲ್ಲ! ಒಂದೇ ಮನಸ್ಸು ಒಂದೇ ಅಭಿಪ್ರಾಯವವೂ ಉಳ್ಳವರಾಗಿ ಐಕ್ಯತೆಯಲ್ಲಿ ಇರ ಬೇಕೆಂದು ಪೌಲನು ಕೊರಿಂಥದವರನ್ನು ಒತ್ತಾಯಪಡಿಸಿದನು (1 ಕೊರಿಂಥ 1:10). ಆರು ಭಿನ್ನವಾದ ಸಭೆಗಳು - ಭಿನ್ನವಾದ ಹೆಸರುಗಳನ್ನು ಧರಿಸಿ, ರಕ್ಷಣೆಯ ಭಿನ್ನವಾದ ವಿಧಾನಗಳನ್ನು ಬೋಧಿಸಿ, ಭಿನ್ನವಾಗಿ ಆರಾಧಿಸುತ್ತಾ - ಸಹಕರಿಸಲು ಒಪ್ಪಿಕೊಳ್ಳುವಾಗ ಅವರು ಎಲ್ಲರೂ ಒಪ್ಪಿಕೊಳ್ಳುವರೋ? ಅವರು ಒಂದೇ ಮನುಸ್ಸುಳ್ಳವರೂ ಒಂದೇ ಅಭಿಪ್ರಾಯವುಳ್ಳವರೂ ಆಗಿರುವರೋ? ಇಲ್ಲ, ಅವರು ಆಗಿರುವದಿಲ್ಲ!

ಬೈಬಲಿನ ಐಕ್ಯತೆಯು ನಿಜವಾದ ಐಕ್ಯತೆಯಾಗಿರುವುದು. ಅದು ತತ್ವಗಳ ಮತ್ತು ಆಚರಣೆಯ ಐಕ್ಯತೆಯಾಗಿರುವುದು. ಯಾವುದೇ ರೀತಿಯ ಕಲ್ಪನೆಯಿಂದ ಸಹಕಾರದ ಮುಖಾಂತರ ಐಕ್ಯತೆಗಾಗಿ ಮಾಡುವ ಪ್ರಯತ್ನಗಳು ಆ ರೀತಿಯ ಐಕ್ಯತೆಯು ಪರಿಣಾಮಕಾರಿಯಾದವುಗಳಾಗುವುದಿಲ್ಲ.

ಧಾರ್ಮಿಕ ವಿಭಾಗವನ್ನು ಜಯಿಸಲು ಮನುಷ್ಯರು ಉಪಯೋಗಿಸಿದ ಎರಡನೆಯ ಮಾರ್ಗವು ಸಭೆಯ ಕೂಡಿಸಿಕೊಳ್ಳುವಿಕೆಯ ಪರಿಣಾಮವಾಗಿ ಆದ ರಚನಾತ್ಮಕ ಐಕ್ಯತೆ. *ಐಕ್ಯತೆಯಲ್ಲಿ ಒಳಗೊಂಡಿರುವ ಸಭೆಗಳು* ಐಕ್ಯವಾದ ಸಭೆಯು ಯಾವ ರೂಪವನ್ನು ತೆಗೆದು ಕೊಳ್ಳಬೇಕೆಂದು ತೀರ್ಮಾನಿಸುವದಕ್ಕಾಗಿ ಒಪ್ಪಂದ ಮಾಡಿಕೊಳ್ಳ ಬೇಕಾಗಿದ್ದ ದರಿಂದ ಇದನ್ನು ಒಪ್ಪಂದದ ಮುಖಾಂತರ ಐಕ್ಯತೆ ಎಂದು ಕರೆಯಬಹುದು.

ಈ ವಿಧಾನದೊಂದಿಗೆ ಯಾವುದಾದರೂ ತಪ್ಪು ಇರುವುದೋ? "ಸಹಕಾರದ ಮುಖಾಂತರ ಐಕ್ಯತೆಯ" ತತ್ವಕ್ಕೆ ವಿರುದ್ಧವಾಗಿ ಕೊಡಲ್ಪಡುವ ಆಕ್ಷೇಪಣೆಗೆ ಇದು ಉತ್ತರ ಕೊಡುತ್ತದೆ - ನಿಜವಾದ ಐಕ್ಯತೆಯನ್ನು ಉತ್ಪಾದಿಸುತ್ತದೆ. ಹೊಸ ಸಭೆಯು ನಿಜವಾಗಿಯೂ ಒಂದಾಗಿರುತ್ತದೆ. ಆದರೂ, ಈ ವಿಧಾನಕ್ಕೆ ಎರಡು ಆಕ್ಷೇಪಣೆಗಳನ್ನು ಕೊಡಬಹುದು.

ಒಂದು ಒಪ್ಪಂದದ ಮುಖಾಂತರ ಐಕ್ಯತೆಯು ಹೆಚ್ಚು ಐಕ್ಯತೆಯಲ್ಲಿ ಪರಿಣಾಮ ಗೊಳ್ಳುವಂತೆ ತೋರುವದಿಲ್ಲ, ಅದರಲ್ಲಿ ಅದು ಕೆಲವು ಸಭೆಗಳಲ್ಲಿ ಪರಿಣಾಮಗೊಳ್ಳು ವಂತೇ ತೋರುವದಿಲ್ಲ. ಕ್ಯಾನಡಾದಲ್ಲಿ ಮೂರು ಸಭೆಗಳು "ಯುನೈಟೆಡ್ ಚರ್ಚ್‌ನ್ನು" ರೂಪಿಸಲು ಒಂದಾದವು. 1960ರ ದಶಕದ ಪ್ರಾರಂಭದಲ್ಲಿ ನಾವು ಕ್ಯಾನಡಾದಲ್ಲಿ ವಾಸಿ ಸಿದ್ದಾಗ, ಯುನೈಟೆಡ್ ಚರ್ಚ್ ಬಹುಶಃ ಅತಿದೊಡ್ಡ ಪ್ರೊಟಸ್ಟಂಟ್ ಸಭಾಪಂಗಡವಾಗಿತ್ತು. ಆದರೆ ಕ್ಯಾನಾಡದಲ್ಲಿ ಅದೇ ಮೂರು ಸಭೆಗಳ ಯುನೈಟೆಡ್ ಚರ್ಚಿನಿಂದ ಪ್ರತ್ಯೇಕ ಸಭೆಗ ಳಾಗಿ ಅಸ್ತಿತ್ವದಲ್ಲಿದ್ದವು. ಒಂದು ಗೂಡಿಸುವಿಕೆಯು ಸಂಭವಿಸಿದಾಗ ವಿರೋಧಿಸಿದ ಸ್ಥಳಿಕ ಸಭೆಗಳು ಮತ್ತು ವ್ಯಕ್ತಿಗಳು ಯುನೈಟೆಡ್ ಚರ್ಚಿನಿಂದ ಹೊರಗೆ ಇರುವದನ್ನು ಆಯ್ದುಕೊಂಡು, ತಮ್ಮ ಹಿಂದಿನ ಸಭಾಪಂಗಡಗಳಲ್ಲಿ ಉಳಿದುಕೊಂಡರು. ಒಂದು

ಗೂಡುವದರ ಉದ್ದೇಶವು ಮೂರು ಸಭೆಗಳು ಇದ್ದಲ್ಲಿ ಒಂದು ಸಭೆಯನ್ನು ಮಾಡುವುದು ಆಗಿತ್ತು. ನಿಜವಾದ ಪರಿಣಾಮವು ಮೂರು ಸಭೆಗಳು ಇದ್ದಲ್ಲಿ ಈಗ ನಾಲ್ಕು ಸಭೆಗ ಳಾದವು: ಅದೇ ಮೂರು ಸಭೆಗಳು ಮತ್ತು ಹೊಸ ಸಭಾಪಂಗಡ - ಯುನೈಟೆಡ್ ಚರ್ಚ್. ಆ ಒಂದುಗೂಡುವಿಕೆಯು ಕಡಿಮೆ ಮಾಡುವದಕ್ಕಿಂತ ಹೆಚ್ಚು ವಿಭಜನೆಯನ್ನು ಮಾಡಿತು.

ಐಕ್ಯತೆಗೆ ಮಾರ್ಗದಂತೆ ಒಪ್ಪಂದಕ್ಕೆ ಇನ್ನೊಂದು ಆಕ್ಷೇಪಣೆಯು ಇದಾಗಿದೆ: "ಒಂದು ದೊಡ್ಡ ಸಭೆಯಾಗಲು," ಈ ತಳಹದಿಯ ಮೇಲೆ ಸಭಾಪಂಗಡಗಳು ಒಂದು ಗೂಡುವಾಗ, "ಒಂದು ದೊಡ್ಡ ಸಭೆಯು" ದೇವರಿಗೆ ಮೆಚ್ಚಿಕೆಯಾಗಿರುವುದು ಎಂಬುದಕ್ಕೆ ಭರವಸೆ ಕೊಡಲು ಯಾವುದೂ ಇರುವದಿಲ್ಲ. ಒಪ್ಪಂದವು ಯಾವಾಗಲೂ ಮಾನವರ ಅಭಿಪ್ರಾಯಗಳ ಮೇಲೆ ಮತ್ತು ಸಾಂಪ್ರಾದಾಯಗಳ ಮೇಲೆ ಅವಲಂಭಿಸಿರುತ್ತದೆ. ಒಂದು ಸಭಾಪಂಗಡದ ಪ್ರತಿನಿಧಿಗಳು, ಉದಾಹರಣೆಗಾಗಿ, "ನೀವು ನಮ್ಮ ಆರಾಧನೆಯ ಪದ್ಧತಿಯನ್ನು ಸ್ವೀಕರಿಸಿದರೆ, ನಾವು ಸಭೆಯ ರಚನೆಯ ಮೇಲೆ ನಿಮ್ಮೊಂದಿಗೆ ಒಪ್ಪಂದ ಮಾಡಿಕೊಳ್ಳುತ್ತೇವೆ" ಎಂದು ಹೇಳುವರು. ಸತ್ಯವನ್ನು ಹೊಂದಲಿಕ್ಕೆ ಒಪ್ಪಂದವು ಅತ್ಯುತ್ತಮವಾದ ಮಾರ್ಗವಾಗಿರುವದಿಲ್ಲ. ಮತ್ತು ಸತ್ಯವು ಐಕ್ಯತೆಗಿಂತ ಹೆಚ್ಚು ಮಹತ್ವದ್ದಾಗಿರುತ್ತದೆ. "ಸತ್ಯವನ್ನು ತಿಳಿದುಕೊಳ್ಳುವಿರಿ ಮತ್ತು ಸತ್ಯವು ನಿಮ್ಮನ್ನು ಬಿಡುಗಡೆ ಮಾಡುವುದು" (ಯೋಹಾನ 8:32) ಎಂದು ಯೇಸು ಹೇಳಿ ದನು. ಐಕ್ಯತೆಯ ಹೆಸರಿನಲ್ಲಿ ತಪ್ಪನ್ನು ನಂಬಿ, ರೂಢಿಪಡಿಸುವುದು ದೇವರನ್ನು ಮೆಚ್ಚಿಸುವದರಲ್ಲಿ ಎಂದೂ ಪರಿಣಾಮಗೊಳ್ಳುವದಿಲ್ಲ.

ನಾವು ಯೋಚಿಸುವದರ ಆಧಾರದ ಮೇಲೆ ಐಕ್ಯವಾಗುವದಕ್ಕೆ ಒಪ್ಪಂದ ಮಾಡಿಕೊಂಡು ಪ್ರಾರಂಭಿಸಿದರೆ, ನಾವು "ಒಂದು ದೊಡ್ಡ ಸಭೆಯಲ್ಲಿ" ಐಕ್ಯವಾಗಬಹುದು. ಆದರೆ ಆ "ಒಂದು ದೊಡ್ಡ ಸಭೆಯು" ದೇವರಿಗೆ ಮೆಚ್ಚಿಕೆಯಾದದ್ದು ಆಗದಿದ್ದರೆ, ನಾವೇ ನನ್ನು ಸಾಧಿಸಿದಂತಾಗುತ್ತದೆ? ಮಧ್ಯ ಯುಗಗಳಲ್ಲಿ, ಕ್ರೈಸ್ತತ್ವವು ಹೆಚ್ಚಾಗಿ "ಒಂದು ದೊಡ್ಡ ಸಭೆಯಾಗಿತ್ತು" ಅದು ಐಕ್ಯತೆಯಾಗಿತ್ತು. ಆದರೆ "ಒಂದು ದೊಡ್ಡ ಸಭೆಯು" ದೇವರನ್ನು ಮೆಚ್ಚಿಸಿತೋ? ಅದು ಮೆಚ್ಚಿಸಿತು ಎಂದು ನಮ್ಮಲ್ಲಿ ಕೆಲವರು ಮಾತ್ರವೇ ಒಪ್ಪಿಕೊಳ್ಳುತ್ತೇವೆ.

ಆದುದರಿಂದ ಸಭೆ ಒಂದುಗೂಡುವುದು ವಿಭಜನೆಯ ಸಮಸ್ಯೆಗೆ ಪರಿಹಾರವಾ ಗಿರುವದಿಲ್ಲ. ಅವು ಒಂದು ಸಭೆಯಾಗಿ ಪರಿಣಾಮಗೊಂಡರೂ, ಸತ್ಯಕ್ಕನುಗುಣವಾಗಿ ಆ ಸಭೆಯು ಬೋಧಿಸದಿದ್ದರೆ ಹಾಗೂ ಆರಾಧಿಸದಿದ್ದರೆ, ಅದರಲ್ಲಿ ಸೇರಿಕೊಳ್ಳುವವರು ಹೆಚ್ಚು ಉತ್ತಮರಾಗುವದಿಲ್ಲ. ಐಕ್ಯತೆಯನ್ನು ಹುಡುಕುವಲ್ಲಿ, ಮೊದಲನೆಯದಾಗಿ ಸತ್ಯಕ್ಕೆ ವಿಧೇಯರಾಗುವದರಿಂದ ದೇವರನ್ನು ಸಂತೋಷಗೊಳಿಸುವದರ ಬಗ್ಗೆ ಮತ್ತು ಎರಡನೆಯದಾಗಿ, ಒಂದಾಗಿರುವದರ ಬಗ್ಗೆ ಚಿಂತಿಸುವವರಾಗಿರುವ ಅಗತ್ಯತೆಯಿದೆ.

ಜನರು ಸೂಚಿಸುವ ಐಕ್ಯತೆಯನ್ನು ಸಾಧಿಸುವದಕ್ಕೆ ಮೊದಲನೆಯ ಮಾರ್ಗವು "ಅಂಬ್ರೆಲ್ಲಾ ಅಪ್ರೋಚ್" ದಂತೆ ಇರುವವೆಂದು ಯೋಚಿಸತಕ್ಕದ್ದು. ವಿಚಾರವು, ಎಲ್ಲಾ ಸಭಾಪಂಗಡಗಳನ್ನು ಇಲ್ಲವೇ "ಕ್ರೈಸ್ತರನ್ನು" ಒಂದೇ "ಕೊಡೆಯ" ಕೆಳಗೆ ಇಲ್ಲವೇ ಎಲ್ಲವನ್ನೊಳಗೊಂಡ ಸಂಘಟನೆಯಲ್ಲಿ ಇಡುವುದಾಗಿದೆ ಮತ್ತು ಆಗ ಎಲ್ಲವೂ ಒಂದೇ ಯಾಗಿರುತ್ತದೆ ಎಂಬುದು. ಆದರೆ ಅದು ಆ ರೀತಿಯಲ್ಲಿ ಕಾರ್ಯಮಾಡುವದಿಲ್ಲ.

ಜನರಿಂದ ಸೂಚಿಸಲ್ಪಟ್ಟ ಐಕ್ಯತೆಯನ್ನು ಸಾಧಿಸುವದಕ್ಕಾಗಿದ್ದ ಎರಡನೆಯ ಮಾರ್ಗವು "ಮಿಶ್ರಣದ ವಿಧಾನ"ದಂತೆ ಆಗಿರುವದೆಂದು ಯೋಚಿಸಬಹುದು. ಒಂದು ಹೊಸ ಉತ್ಪಾದನೆ ಮಾಡಲು ಹಲವಾರು ದ್ರವಗಳನ್ನು ಒಂದಾಗಿ ಸುರಿಯುವಂತೆ ಅದು

ಇರುತ್ತದೆ. ಉತ್ಪಾದನೆಯು, ಅದು ಒಂದೇ ಆಗಿರುವಾಗ, ಅದು ಯೋಗ್ಯವಾದ ಮಿಶ್ರಣ ವಾಗುವುದಿಲ್ಲ. ಹಲವಾರು ಔಷಧಗಳನ್ನು ಒಂದು ಗೂಡಿಸುವದರಿಂದ, ನಿನಗೆ ಸಹಾಯ ಮಾಡುವ ಔಷಧವಾಗಿ ಅದು ಪರಿಣಾಮಗೊಳ್ಳುವದಿಲ್ಲ; ಹಲವಾರು ಸಭಾಪಂಗಡಗಳ ತತ್ವಗಳನ್ನು ಒಂದುಗೂಡಿಸುವುದು ನೀನು ದೇವರನ್ನು ಮೆಚ್ಚಿಸಲು ಸಹಾಯ ಮಾಡುವ ಮಿಶ್ರಣವಾಗಿ ಪರಿಣಾಮಗೊಳ್ಳುವದಿಲ್ಲ.

## ಬೈಬಲಿನ ವಿಧಾನ

ಎರಡನೆಯದು, ಐಕ್ಯತೆಗೆ ಮನುಷ್ಯನ ವಿಧಾನದೊಂದಿಗೆ ಬೈಬಲಿನ ವಿಧಾನದ ಭಿನ್ನತೆ ತೋರಿಸಿರಿ. ಬೈಬಲಿನ ಐಕ್ಯತೆಯ ಐದು ಲಕ್ಷಣಗಳನ್ನು ಯಾದಿ ಮಾಡಬಹುದು.

*ಬೈಬಲಿನ ಐಕ್ಯತೆಯು ದೇವರ ವಾಕ್ಯದ ಮೇಲೆ ಅವಲಂಭಿಸಿರುವ ಐಕ್ಯತೆಯಾಗಿದೆ.* ಐಕ್ಯತೆಗಾಗಿ ಯೇಸುವಿನ ಪ್ರಾರ್ಥನೆಯ ಹಿನ್ನಲೆಯಲ್ಲಿ, ವಾಕ್ಯದ ಮಹತ್ವವನ್ನು ಆತನು ಒತ್ತಿ ಹೇಳುತ್ತಾನೆ. ಅಪೊಸ್ತಲರಿಗೆ ವಾಕ್ಯವು ಕೊಡಲ್ಪಟ್ಟಿದೆ ಯೆಂದು ಯೇಸು ಹೇಳಿದನು (ಯೋಹಾನ 17:6, 14), ಆ ವಾಕ್ಯವನ್ನು ಅವರು ಕೈಕೊಂಡಿದ್ದಾರೆ (ಯೋಹಾನ 17:6), ಅವರು ವಾಕ್ಯದಿಂದ ಶುದ್ಧೀಕರಿಸಲ್ಪಡುವರು ಮತ್ತು ಆ ವಾಕ್ಯವು ಸತ್ಯವಾಗಿತ್ತು (ಯೋಹಾನ 17:17, 19), ಮತ್ತು ಅಪೊಸ್ತಲರು ಅದನ್ನು ಪ್ರಸಂಗಿಸಿದಾಗ ಆ ವಾಕ್ಯದ ಮುಖಾಂತರ ಲೋಕವು ಯೇಸುವಿನಲ್ಲಿ ನಂಬುವುದು (ಯೋಹಾನ 17:20). ತನ್ನ ಹಿಂಬಾಲಕರು, *ದೇವರ ವಾಕ್ಯವನ್ನು ಕೇಳುವ ಮತ್ತು ಪ್ರಸಂಗಿಸುವ ಹಾಗೂ ವಿಧೇಯರಾಗುವದರ ಹಿನ್ನಲೆಯಲ್ಲಿ ಒಂದಾಗಿರ ಬೇಕೆಂದು ಯೇಸುವು ಉದ್ದೇಶಿಸಿದನು.*

ನಾವೆಲ್ಲರೂ ಒಂದೇ ಯಾಗಿರಬೇಕಾಗಿದ್ದರೆ ದೇವರ ವಾಕ್ಯಕ್ಕೆ ನಾವು ಯಾಕೆ ವಿಧೇಯರಾಗಬೇಕು?

ಒಂದೇ ಅಧಿಕಾರವನ್ನು ನಾವೆಲ್ಲರೂ ಸ್ವೀಕರಿಸುವವರೆಗೆ ನಾವೆಂದು ಒಂದೇ ಆಗದ ಕಾರಣ ಅದು ಅಗತ್ಯವಾಗಿದೆ. ಧರ್ಮದಲ್ಲಿ ಅಂತಿಮ ಅಧಿಕಾರವು ಯಾವುದು? ಸಭೆಯ ಸಾಂಪ್ರದಾಯ? ಇಲ್ಲವೇ ಬೈಬಲ್? ಬೈಬಲಿನ ಪ್ರಕಾರವಾಗಿ, ಧರ್ಮದಲ್ಲಿ ಅದು ಮಾತ್ರವೇ ನಮಗೆ ಅಧೀಕೃತ ಮಾಗದರ್ಶಿಯಾಗಿದೆ. ಅದು ಮಾತ್ರವೇ ದೇವರಿಂದ ಪ್ರೇರೇಪಿಸಲ್ಪಟ್ಟಿದೆ ಹಾಗೂ ಪ್ರತಿಯೊಂದು ಒಳ್ಳೇ ಕಾರ್ಯಕ್ಕಾಗಿ ಸಂಪೂರ್ಣವಾಗಿ ನಮಗೆ ಒದಗಿಸಿಕೊಡುತ್ತದೆ (2 ತಿಮೊಥೆ 3:16, 17). ಅದು "ಪರಿಪೂರ್ಣ ನಿಯಮ, ಪರಿಪೂರ್ಣ ಸ್ವಾತಂತ್ರ್ಯವನ್ನು" (ಯಾಕೋಬ 1:25) ಮತ್ತು "ಒಂದೇ ಕಾಲಕ್ಕೆ ಪರಿಶುದ್ಧ ರಿಗೆ ಬಿಡುಗಡೆಮಾಡಲ್ಪಟ್ಟ ನಂಬಿಕೆಯನ್ನು" (ಯೂದ 3) ಒಳಗೊಂಡಿರುತ್ತದೆ. ದೇವರ ವಾಕ್ಯದಿಂದ, ಸತ್ಯಕ್ಕೆ ವಿಧೇಯರಾದಾಗ ನಾವು ಹೊಸದಾಗಿ ಹುಟ್ಟಿದ್ದೇವೆ (1 ಪೇತ್ರ 1:22), ಮತ್ತು ಅದರಿಂದ ನಾವು ತೀರ್ಪು ಹೊಂದುತ್ತೇವೆ (ಯೋಹಾನ 12:48). ಬೈಬಲ್ ಧರ್ಮದಲ್ಲಿ ಅಧಿಕಾರವುಳ್ಳದ್ದಾಗಿದೆ. ಅದರ ಮೇಲೆ ನಾವು ಒಪ್ಪಿ ಕೊಳ್ಳುವವರೆಗೆ, ನಾವೆಂದೂ ಒಂದಾಗಿರುವದಿಲ್ಲ.

*ಬೈಬಲಿನ ಐಕ್ಯತೆಯು ಕ್ರಿಸ್ತನಲ್ಲಿಯ ಐಕ್ಯತೆಯಾಗಿದೆ.* ಯೋಹಾನ 17:21ರಲ್ಲಿ ಯೇಸುವು, "ಅವರೆಲ್ಲರೂ ಒಂದಾಗಿರಬೇಕೆಂತಲೂ ತಂದೆಯೇ. ನೀನು ನನ್ನಲ್ಲಿಯೂ ನಾನು ನಿನ್ನಲ್ಲಿಯೂ ಇರುವ ಪ್ರಾಕಾರ ಅವರೂ *ನಮ್ಮಲ್ಲಿ* ಇರಬೇಕೆಂತಲೂ ಕೇಳಿ ಕೊಳ್ಳುತ್ತೇನೆ; ..." ಎಂದು ಹೇಳಿದನು (ಒತ್ತಿ ಹೇಳಿದ್ದು ನನ್ನದು). ಒಬ್ಬರೊಂದಿಗೆ ಒಬ್ಬರಿಗೆ ಇರುವ ನಮ್ಮ ಐಕ್ಯತೆಯು ದೇವರೊಂದಿಗೆ ಮತ್ತು ಕ್ರಿಸ್ತನೊಂದಿಗೆ ಇರುವ

ಐಕ್ಯತೆಯಾಗಿದೆ. ಯೋಹಾನನು ಇದನ್ನು 1 ಯೋಹಾನ 1:7ರಲ್ಲಿ ಸ್ಪಷ್ಟಪಡಿಸುತ್ತಾನೆ: “ಆದರೆ ಆತನು ಬೆಳಕಿನಲ್ಲಿರುವಂತೆಯೇ ನಾವು ಬೆಳಕಿನಲ್ಲಿ ನಡೆದರೆ ನಾವು ಒಬ್ಬರ ಸಂಗಡಲೊಬ್ಬರು ಅನ್ಯೋನ್ಯತೆಯಲ್ಲಿದ್ದೇವೆ. ಮತ್ತು ಆತನ ಕುಮಾರನಾದ ಯೇಸುವಿನ ರಕ್ತವು ಸಕಲ ಪಾಪವನ್ನು ನಿವಾರಣೆ ಮಾಡಿ ನಮ್ಮನ್ನು ಶುದ್ಧಿ ಮಾಡುತ್ತದೆ.” ಐಕ್ಯತೆಯ ಉದ್ದೇಶವು ಒಬ್ಬರೊಂದಿಗೆ ಒಬ್ಬರು ಒಂದಾಗುವುದು ಇಲ್ಲವೇ “ಒಬ್ಬರೊಂದಿಗೆ ಒಬ್ಬರ ಅನ್ಯೋನ್ಯತೆ ಇರುವುದು.” ಹೇಗೆ ಮತ್ತು ಯಾವಾಗ ಅದು ಸಾಧಿಸಲ್ಪಡುವುದು? “ಬೆಳಕಿನಲ್ಲಿ ನಡೆಯುವದರಿಂದ” ಅದು ಸಾಧಿಸಲ್ಪಡುವುದು ಮತ್ತು ನಮ್ಮ ಪಾಪ ಗಳು ಕ್ಷಮಿಸಲ್ಪಟ್ಟಾಗ ಅದು ಸಾಧಿಸಲ್ಪಡುವುದು. ನಮ್ಮ ನೇರವಾದ ಸಂಬಂಧವು ಸರಿಯಾಗಿರುವಾಗ ದೇವರೊಂದಿಗಿನ ನಮ್ಮ ಸಂಬಂಧವು ಸರಿಯಾಗಿರುವುದು ಮತ್ತು ನಮ್ಮ ಪಕ್ಷಗಳಲ್ಲಿರುವ ಸಂಬಂದವು ಸರಿಯಾಗಿರುವಾಗ ಒಬ್ಬರೊಂದಿಗಿನ ಒಬ್ಬರ ಅನ್ಯೋನ್ಯತೆಯು. ಒಂದಾಗುವಿಕೆಯು ಇರುವುದೆಂದು ಯೋಹಾನನು ಹೇಳುತ್ತಿದ್ದಾನೆ.

ನಾವೆಲ್ಲರೂ, ಕ್ರಿಸ್ತನಿಗೆ ಕೂಡಿಸಲ್ಪಡುವಾಗ ನಾವು ಒಬ್ಬರೊಂದಿಗೆ ಒಬ್ಬರು ಒಂದಾಗಿರುವೆವೆಂದು ಬೇರೆ ಮಾತಿನಲ್ಲಿ ಹೇಳಬಹುದು. ಒಂದು ಚಕ್ರದ ಹಲ್ಲುಗಳು ಗಾಲಿಯ ಮಧ್ಯಭಾಗಕ್ಕೆ ಎಲ್ಲವೂ ಸರಿಯಾಗಿ ಜೋಡಿಸಲ್ಪಡುವಾಗ, ಅವುಗಳಿಗೆ ಪರಸ್ಪರ ಪರಿಪೂರ್ಣ ಸಂಬಂಧವಿರುವುದು. ಹಾಗೆಯೇ, ನಾವು ಯೋಗ್ಯವಾಗಿ ಯೇಸುವಿನ ಭಾಗವಾಗುವಾಗ, ನಮ್ಮ ವಿಶ್ವಾಸದ ಜನಕನಾದ, ನಾವು ಯೋಗ್ಯವಾಗಿ ಒಬ್ಬರಿಗೊಬ್ಬರು ಸಂಬಂಧಿಸಲ್ಪಟ್ಟಿರುವೆವು.

*ಬೈಬಲಿನ ಐಕ್ಯತೆಯು ಸಭೆಯ ಒಂದು ಭಾಗದಂತೆ ಐಕ್ಯತೆಯಾಗಿರುವುದು.* ಐಕ್ಯತೆಯು ಕ್ರಿಸ್ತನಲ್ಲಿ ಇದ್ದರೆ, ಐಕ್ಯತೆಯು ಆತನ ಸಭೆಯಲ್ಲಿ ಇರುವುದೆಂದು ತಿಳಿದು ಕೊಳ್ಳಲಿಕ್ಕೆ ಆಶ್ಚರ್ಯಪಡಬಾರದು ಯಾಕಂದರೆ ಸಭೆಯು ಕ್ರಿಸ್ತನ ದೇಹವಾಗಿದೆ, “ಎಲ್ಲವನ್ನೂ ಎಲ್ಲಾ ಸಂಬಂಧದಲ್ಲಿ ವ್ಯಾಪಿಸುವಾತನಿಂದ ಅದು ಪರಿಪೂರ್ಣತೆ ಯುಳ್ಳದ್ದಾಗಿದೆ” (ಎಫೆಸ 1:23). ಸಭೆಯು ಕ್ರಿಸ್ತನ ಪರಿಪೂರ್ಣತೆಯಾಗಿದ್ದರೆ, ಆಗ ಸಭೆಯಲ್ಲಿ ಇಲ್ಲದೆ ಕ್ರಿಸ್ತನಲ್ಲಿ ಇರಲಿಕ್ಕಾಗುವುದಿಲ್ಲ. ಹೀಗೆ, ನಾವು ಒಂದಾಗಿದ್ದರೆ, ನಾವು ಕ್ರಿಸ್ತನಲ್ಲಿ ಮಾತ್ರವೇ ಇರತಕ್ಕದ್ದಲ್ಲ; ಆತನ ದೇಹವಾಗಿರುವ ಸಭೆಯಲ್ಲಿಯೂ ಸಹ ಇರತಕ್ಕದ್ದು.

ಸಭೆಯು ಒಂದೇ ಆಗಿರ್ರುದೆ. ಯೇಸುವು ಒಂದೇ ಒಂದು ಸಭೆಯನ್ನು ಕಟ್ಟಲು ವಾಗ್ದಾನ ಮಾಡಿದನು (ಮತ್ತಾಯ 16:18). ಅದರ ಪರಿಣಾಮವಾಗಿ, ಒಂದೇ ಒಂದು ಸಭೆಯಿರುವುದು (ಎಫೆಸ 4:4). “ಶಿಲುಬೆಯ ಮುಖಾಂತರ ದೇವರಿಗೆ ಒಂದೇ ದೇಹದಲ್ಲಿ” ದೇವರು ಯೆಹೂದ್ಯರನ್ನೂ ಗ್ರೀಕರನ್ನೂ ಒಂದುಗೂಡಿಸಿದ್ದಾನೆ (ಎಫೆಸ 2:16), ಅದರ ಪರಿಣಾಮವಾಗಿ, ಇಂದು ಒಂದೇ ಸಭೆಯಿದೆ - ಒಂದೇ ಹಿಂಡೂ ಒಬ್ಬನೇ ಕುರುಬನೂ ಇದ್ದಾನೆ (ಯೋಹಾನ 10:16). ಸಭೆಯಲ್ಲಿ ಇರುವವರು ದೇಹದ ಸದಸ್ಯರು ಅಥವಾ ಅಂಗಗಳು ಆಗಿದ್ದಾರೆ ಮತ್ತು “ಅನೇಕ ಅಂಗಗಳಿದ್ದರೂ” “ಒಂದೇ ದೇಹವಿದೆ” (1 ಕೊರಿಂಥ 12:12). ತನ್ನ ಹಿಂಬಾಲಕನು ಅನುಭವಿಸಬೇಕೆಂದು ಕ್ರಿಸ್ತನು ಅಪೇಕ್ಷಿಸುವಂಥದ್ದು ಯೇಸುಕ್ರಿಸ್ತನ ಒಂದು ಸಭೆಯಲ್ಲಿಯ ಏಕತೆಯಾಗಿದೆ.

ಹೀಗೆ ಐಕ್ಯತೆಯು ಸಭೆಯ ಹೊರಗೆ ಹುಡುಕುವ ಯಾವುದೋ ಸಂಗತಿಯಾಗಿರುವದಿಲ್ಲ. ಇಲ್ಲವೇ ಸಭಾಪಂಗಡಗಳೊಳಗೆ ಹುಡುಕುವಂಥದ್ದೂ ಅಲ್ಲ. ಛಿನ್ನವಾದ ಸಭೆಗಳ ಐಕ್ಯತೆಯೂ ಅದನ್ನು ಒಳಗೊಂಡಿರುವದಿಲ್ಲ. ವಿಶ್ವಾಸಿಗಳು ಹೊಸ ಒಡಂಬಡಿಕೆಯ ಒಂದೇ ಸಭೆಯ ಭಾಗವಾಗುವಾಗ ಅವರು ಕ್ರಿಸ್ತನಲ್ಲಿ ಒಂದಾಗುವರು.

*ಬೈಬಲಿನ ಐಕ್ಯತೆಯು ಮೂಲ ತತ್ವಗಳ ಐಕ್ಯತೆಯಾಗಿರುತ್ತದೆ.* “ನಾವು ಒಂದೇ

ಮನಸ್ಸುಳ್ಳವರಾಗಬೇಕೆಂದು" ಹೊಸ ಒಡಂಬಡಿಕೆಯು ಬೋಧಿಸುತ್ತದೆ. ಆದಾಗ್ಯೂ ಕ್ರೈಸ್ತತ್ವದೊಳಗೆ, ಬೈಬಲಿನಿಂದ ನೇಮಿಸಿದ ಮೇರೆಗಳೊಳಗೆ, ವಿಧಾನದಲ್ಲಿ ಅಭಿಪ್ರಾಯದ ಭಿನ್ನತೆಗಳಿಗೆ ಅವಕಾಶವಿದೆ.

ಪ್ರಥಮ ಶತಮಾನದ ಸಭೆಗಳು ತತ್ವಗಳ ಮೇಲೆ ಒಪ್ಪಿಕೊಂಡಿದ್ದವು.ಆದಾಗ್ಯೂ ವಿಧಾನದಲ್ಲಿ ಕೆಲವು ಭಿನ್ನತೆಗಳು ಅಸ್ತಿತ್ವದಲ್ಲಿದ್ದವು. ಉದಾಹರಣೆಗಾಗಿ, ಕರ್ತನ ದಿನದಂದು ಎಲ್ಲರೂ ಆರಾಧಿಸಿದಾಗ್ಯೂ, ಕರ್ತನ ದಿನದಂದು ಒಂದೇ ಸಮಯದಲ್ಲಿ ಎಲ್ಲರೂ ಕೂಡಿಬಂದಿರಲಿಕ್ಕಿಲ. ಕರ್ತನ ಕಾರ್ಯವನ್ನು ವಿಸ್ತರಿಸಲು ಭಿನ್ನವಾದ ವಿಧಾನಗಳನ್ನು ಅವರು ಉಪಯೋಗಿಸಿದ್ದಿರಬೇಕು.

ಇದಲ್ಲದೆ, ವಿಗ್ರಹಗಳಿಗೆ ಅರ್ಪಿಸಿದ ಮಾಂಸವನ್ನು ತಿನ್ನಬೇಕೋ ಬೇಡವೋ ಎಂಬಂಥ ಪ್ರಶ್ನೆಗಳಿಗೆ, ಸಂದರ್ಭಕ್ಕನುಗುಣವಾಗಿ ಉತ್ತರಿಸಲ್ಪಡಬೇಕಾಗಿತ್ತು. ಆದುದರಿಂದ, ಒಂದು ಸಭೆಯಲ್ಲಿಯ ಕ್ರೈಸ್ತರು ಅಂಥ ಮಾಂಸ ತಿನ್ನುತ್ತಿದ್ದಿರಬಹುದು. ಮತ್ತು ಬೇರೆ ಸಭೆಯಲ್ಲಿ ಕ್ರೈಸ್ತರು ತಿನ್ನದೇ ಇರುತ್ತಿರಬಹುದು.

ಯುಗಗಳೆಲ್ಲೆಲ್ಲಾ ಕ್ರೈಸ್ತರೊಳಗೆ ಕೆಲವು ಭಿನ್ನತೆಗಳು ಮುಂದುವರಿದಿದ್ದವು - ಕರ್ತನ ಕಾರ್ಯವನ್ನು "ಹೇಗೆ" ಮುಂದುವರಿಸಬೇಕು ಎನ್ನುವದರ ಬಗ್ಗೆ, ಪ್ರಾಧಾನ್ಯತೆ ಮತ್ತು ವಿಧಾನದ ವಿಷಯಗಳ ಬಗ್ಗೆ, ಮತ್ತು ಬೈಬಲ್ ಸಷ್ಟವಾಗಿ ಮಾತನಾಡದ ವಿವಾದಾತ್ಮಕ ಪ್ರಶ್ನೆಗಳ ಬಗ್ಗೆ ಭಿನ್ನತೆಗಳಿದ್ದವು. ಕ್ರೈಸ್ತರು ಒಪ್ಪಿಕೊಳ್ಳದಿರುವಾಗ ಏನು ಮಾಡತಕ್ಕದ್ದು? ಸಂಪೂರ್ಣ ಏಕರೂಪತೆಯಿಲ್ಲದೇ ಐಕ್ಯತೆಯ ವಿಚಾರವನ್ನು ಅವರು ಸ್ವೀಕರಿಸಲ್ಪಡಬೇಕಾಗಿತ್ತು. ಅಭಿಪ್ರಾಯಗಳ ವಿಷಯಗಳಲ್ಲಿ. ನಮ್ಮೊಂದಿಗೆ ಭಿನ್ನತೆ ಯುಳ್ಳವರಾಗಿರಲು ಇತರರನ್ನು ಬಿಡುವ ಅಗತ್ಯತೆಯಿದೆ.

ಹಾಗಿದ್ದರೂ, ವಿಶ್ವಾಸದ ವಿಷಯಗಳಲ್ಲಿ ಹೊಸ ಒಡಂಬಡಿಕೆಯ ಕ್ರೈಸ್ತರ ಮಧ್ಯದಲ್ಲಿ ಐಕ್ಯತೆ ಇತ್ತು ಅಭಿಪ್ರಾಯಗಳ ಪ್ರಶ್ನೆಗಳ ಮೇಲೆ ಕ್ರೈಸ್ತರು ಭಿನ್ನತೆಯು ಳ್ಳವರಾಗಿದ್ದರಬಹುದು. ಆದರೆ ಅವರು ಎಲ್ಲರೂ ಕ್ರೈಸ್ತತ್ವದ ಮೂಲ ತತ್ವಗಳ ಮೇಲೆ ಒಪ್ಪಿಕೊಂಡಿದ್ದರು: ಒಬ್ಬನು ಕ್ರೈಸ್ತನಾಗಬೇಕಾದರೆ ಏನು ಅವಶ್ಯ ಎಂಬುದರ ಮೇಲೆ, ಕರ್ತನ ಸಭೆಯಲ್ಲಿ ಕ್ರೈಸ್ತನಂತೆ ಕಾರ್ಯ ಮಾಡಲು ಮತ್ತು ಆರಾಧಿಸಲು, ಮತು ಕ್ರೈಸ್ತ ಜೀವನ ಜೀವಿಸಲು ಒಪ್ಪಿಕೊಂಡಿದ್ದರು.

*ಬೈಬಲಿನ ಐಕ್ಯತೆಯು ಸರಿಯಾದ ಮನೋಭಾವನೆಗಳಿಂದ ಕಾದುಕೊಂಡ ಐಕ್ಯತೆಯಾಗಿತ್ತು.* ಕ್ರಿಸ್ತನಿಗೆ ನಮ್ಮ ವಿಧೇಯತೆಯ ಮುಖಾಂತರ ಆತನೊಂದಿಗೆ ಒಮ್ಮೆ ನಾವು ಒಂದಾದಾಗ, ಮತ್ತು ಆತನ ಸಭೆಯ ಭಾಗವಾದಾಗ, ಮಾಡಲಿಕ್ಕೆ ಇನ್ನೂ ಒಂದು ಸಂಗತಿ ಉಳಿಯುತ್ತದೆ: ನಮ್ಮ ಐಕ್ಯತೆಯು ಯೋಗ್ಯ ಮನೋಭಾವನೆಗಳಿಂದ ಮುಂದುವರಿಸಲ್ಪಡತಕ್ಕದ್ದು.

ಬೈಬಲಿನ ಐಕ್ಯತೆಯು ಕಳೆದುಕೊಳ್ಳಲ್ಪಡಬಹುದು. ಹೊಸ ಒಡಂಬಡಿಕೆಯ ಸಮಯಗಳಲ್ಲಿ, ವಿಶ್ವಾಸಿಗಳೆಲ್ಲರೂ ಒಂದಾಗಿದ್ದರು. ಅವರು ಒಂದೇ ಸಂಗತಿಗಳನ್ನು ನಂಬಿದರು ಮತ್ತು ಬೋಧಿಸಿದ ಮತ್ತು ಒಂದೇ ಸಭೆಯಲ್ಲಿ ಇದ್ದರು. ಆದಾಗ್ಯೂ ಅವರು ವಿಭಜನೆಗಳನ್ನು ತಪ್ಪಿಸಿಕೊಳ್ಳಲು ಮತ್ತು ಐಕ್ಯತೆಯನ್ನು ಕಾಪಾಡಿಕೊಳ್ಳಲು ಪ್ರಬೋಧಿ ಸಲ್ಪಡುವ ಅಗತ್ಯತೆಯುಳ್ಳವರಾಗಿದ್ದರು. ಯಾಕೇ? ಯಾಕಂದರೆ ಅವರ ನಿಜವಾದ ಐಕ್ಯತೆಯು ಹೋರಾಟದಿಂದ ಕಳೆದುಕೊಳ್ಳಲ್ಪಡುವ ಗಂಡಾಂತರದಲ್ಲಿತ್ತು.

ಎಫೆಸದಲ್ಲಿಯ ಕ್ರೈಸ್ತರನ್ನು ಪೌಲನು ಎಚ್ಚರಿಸಿದನು: "ನೀವು ಪೂರ್ಣ ವಿನಯ ಸಾತ್ವಿಕತ್ವಗಳಿಂದಲೂ ದೀರ್ಘಶಾಂತಿಯಿಂದಲೂ ಕೂಡಿದವರಾಗಿ ಪ್ರೀತಿಯಿಂದ ಒಬ್ಬರನ್ನೊಬ್ಬರು ಸಹಿಸಿಕೊಳ್ಳಿರಿ. ಸಮಾಧಾನವೆಂಬ ಬಂಧನದಿಂದ ಕಟ್ಟಲ್ಪಟ್ಟ

ವಾರಾಗಿದ್ದು ಪರಿಶುದ್ಧಾತ್ಮನಿಂದುಂಟಾಗುವ ಐಕ್ಯವನ್ನು ಕಾಪಾಡಿಕೊಳ್ಳುವದಕ್ಕೆ ಆಸಕ್ತರಾಗಿರಿ" (ಎಫೆಸ 4:2, 3). "... ನನ್ನ ಸಂತೋಷವನ್ನು ಪರಿಪೂರ್ಣ ಮಾಡಿರಿ. ನಿಮ್ಮೆಲ್ಲರಲ್ಲಿ ಒಂದೇ ಪ್ರೀತಿಯಿರಲಿ; ಅನ್ಯೋನ್ಯಭಾವವುಳ್ಳವರೂ ಒಂದೇ ಗುರಿಯಿಟ್ಟುಕೊಂಡವರೂ ಆಗಿರ್ರಿ" ಎಂದು ಅವನು ಫಿಲಿಪ್ಪಿಯವರನ್ನು ಕೇಳಿ ಕೊಂಡನು (ಫಿಲಿಪ್ಪಿ 2:2). "ಇದೆಲ್ಲಾದರ ಮೇಲೆ ಪ್ರೀತಿಯನ್ನು ಧರಿಸಿಕೊಳ್ಳಿರಿ; ಅದು ಸಮಸ್ತವನ್ನು ಸಂಪೂರ್ಣ ಮಾಡುವ ಬಂಧವಾಗಿದೆ" (ಕೊಲೊಸ್ಸೆ 3:14) ಎಂದು ಕೊಲೊಸ್ಸೆಯವರನ್ನು ಒತ್ತಾಯಿಸಿದನು. ಅದೇ ಸಂದೇಶದ ಅಗತ್ಯತೆ ನಮಗಿದೆ.

ಕ್ರಿಸ್ತನ ಸಭೆಯಲ್ಲಿ ಇರುವ ಎಲ್ಲರೂ ದೈಹಿಕವಾಗಿ ಒಂದಾಗಿದ್ದಾರೆ. ಈ ವಾಕ್ಯ ಭಾಗಗಳು, ಒಂದಾಗಿರಲು, ನಾವು ಒಂದಾಗಿರುವೆವೆಂಬಂತೆ ವರ್ತಿಸಬೇಕೆಂದು ಹೇಳುತ್ತವೆ. ದೇವರ ವಾಕ್ಯದ ಪ್ರಕಾರವಾಗಿ ಒಂದಾಗಿರುವುದು ಮಹತ್ವದ್ದಾಗಿದೆ. ಆದರೆ ಚಿಂತನೆ, ಸಹಾನುಭೂತಿ, ಮತ್ತು ಕರುಣೆಯಂಥ ಮನೋಭಾವನೆಗಳನ್ನು - ದೀನತೆ, ತಾಳ್ಮೆ, ಸಹನೆ, ಕ್ಷಮಾಪಣೆ, ಪ್ರೀತಿ, ನಿಸ್ವಾರ್ಥತೆ, ವಿನಯ, ಕ್ರಿಸ್ತನ ಮನಸ್ಸು - ಇವುಗಳನ್ನು ಬೆಳಸಿಕೊಳ್ಳುವುದು ಮಹತ್ವದ್ದಾಗಿದೆ. ಎಲ್ಲಕ್ಕಿಂತಲೂ ಹೆಚ್ಚಾಗಿ ಪ್ರೀತಿಗಾಗಿ ನಾವು ಶ್ರಮಿಸತಕ್ಕದ್ದು. ಯಾಕಂದರೆ ಪ್ರೀತಿಯು, "ಸಮಸ್ತವನ್ನು ಸಂಪೂರ್ಣ ಮಾಡುವ ಬಂಧವಾಗಿದೆ" (ಕೊಲೊಸ್ಸೆ 3:14; RSV).

## ಮುಕ್ತಾಯ

ಬೈಬಲಿನ ಪ್ರಕಾರದ ಐಕ್ಯತೆಯು ಒಂದೇ ರೀತಿಯಿರದ ಸಭೆಗಳ ಮಧ್ಯದಲ್ಲಿ ಕೇವಲ ಸಹಕಾರವಾಗಿರುವುದಿಲ್ಲ, ಮನುಷ್ಯರ ವಿಚಾರಗಳ ಒಪ್ಪಂದದಿಂದ ಪರಿಣಾಮಗೊಳ್ಳುವಂಥದ್ದೂ ಅಲ್ಲ.

*ಬೈಬಲಿನ ಪ್ರಕಾರದ ಐಕ್ಯತೆಯು ಹೀಗಿರುತ್ತದೆ: (1) ದೇವರ ವಾಕ್ಯದ ಮೇಲೆ ಅವಲಂಭಿಸಿದ ಐಕ್ಯತೆ ... (2) ಕ್ರಿಸ್ತನಲ್ಲಿ ಕಂಡುಬಂದದ್ದು ... (3) ಸಭೆಯ ಒಂದು ಭಾಗದಂತೆ ... (4) ಮತ್ತು ಮೂಲ ತತ್ವಗಳ ಐಕ್ಯತೆಯಾಗಿರುತ್ತದೆ ... (5) ಸರಿಯಾದ ಮನೋಭಾವನೆಗಳಿಂದ ಕಾಪಾಡಲ್ಪಟ್ಟದ್ದು.*

ಐಕ್ಯತೆಗೆ ನೀವು ಏನನ್ನು ಕೊಡಬಹುದು? ಯಾವುದೇ ದಿಕ್ಕಿನಿಂದ ಅದರ ಕಡೆಗೆ ನೋಡಿದರೂ, *ನಿಮ್ಮ ಪಾಪಗಳ ಪರಿಹಾರಕ್ಕಾಗಿ ಬಾಪ್ತಿಸ್ಮ ಹೊಂದುವದರಿಂದ ನಂಬಿಕೆ ಮತ್ತು ವಿಧೇಯತೆಯ* ಮುಖಾಂತರ ನೀನು ಕ್ರೈಸ್ತನಾಗುವ ಅಗತ್ಯತೆ ಇರುತ್ತದೆ.

ಕ್ರಿಸ್ತನ ಮತ್ತು ಆತನ ವಾಕ್ಯದ ಅಧಿಕಾರವನ್ನು ಸ್ವೀಕರಿಸುವದಕ್ಕೆ *ನೀನು ಬಾಪ್ತಿಸ್ಮ ಹೊಂದುವ ಅಗತ್ಯತೆ ಇದೆ* (ಮತ್ತಾಯ 28:18-20).

ಯೇಸುವಿನಲ್ಲಿ ನಂಬಿಕೆಯಿಟ್ಟ ನಂತರ, ಕ್ರಿಸ್ತನಲ್ಲಿ ಸೇರಲು *ನೀನು ಬಾಪ್ತಿಸ್ಮ ಹೊಂದುವ ಆಗತ್ಯತೆ ಇದೆ* (ಗಲಾತ್ಯ 3:26-28).

ಕ್ರೈಸ್ತರು ಐಕ್ಯತೆಯಲ್ಲಿರುವ ಒಂದು ಸಭೆಯಲ್ಲಿ ಪ್ರವೇಶಿಸಲು *ನೀನು ಬಾಪ್ತಿಸ್ಮ ಹೊಂದುವ ಅಗತ್ಯತೆ ಇರುತ್ತದೆ* (1 ಕೊರಿಂಥ 12:13).

ಬಾಪ್ತಿಸ್ಮವು ನಿಶ್ಚಯವಾಗಿ ಕ್ರೈಸ್ತತ್ವದ ಮೂಲ ತತ್ವಗಳಲ್ಲಿ ಒಂದಾಗಿರುವದರಿಂದ *ನೀನು ಬಾಪ್ತಿಸ್ಮ ಹೊಂದುವ ಅಗತ್ಯತೆಯಿದೆ* (ಮಾರ್ಕ 16:15, 16) ಮತ್ತು ಪಾಪಗಳ ಕ್ಷಮಾಪಣೆ ಹೊಂದಿಕೊಳ್ಳುವುದು ಅಗತ್ಯವಾಗಿದೆ (ಅಪೊಸ್ತಲರ ಕೃತ್ಯಗಳು 2:38). ಎಫೆಸ 4ರಲ್ಲಿ "ಒಂದು" ಎಂಬ ಏಳರಲ್ಲಿ ಅದು ಒಂದಾಗಿದೆ.

ಕ್ರಿಸ್ತನಲ್ಲಿ ನಂಬಿಕೆಯಿಟ್ಟು ನಿನ್ನ ಪಾಪಗಳಿಗಾಗಿ ಮಾನಸಾಂತರ ಪಟ್ಟನಂತರ *ನೀನು ಬಾಪ್ತಿಸ್ಮ ಹೊಂದಿದಾಗ,* ನೀನು ಕ್ರಿಸ್ತನೊಂದಿಗೆ ಮತ್ತು ಆತನನ್ನು ಹಿಂಬಾಲಿಸುವ

ಎಲ್ಲರೊಂದಿಗೆ ಐಕ್ಯತೆಯಲ್ಲಿರುವಿ, ಕ್ರೈಸ್ತ ಐಕ್ಯತೆಯನ್ನು ಪ್ರೋತ್ಸಾಹಿಸುವದಕ್ಕೆ ನೀನು ತೆಗೆದುಕೊಳ್ಳುವ ಮೊದಲ ಹೆಜ್ಜೆ ಆದಾಗಿರುತ್ತದೆ. ನಿನ್ನ ಸಹೋದರನನ್ನು ಪ್ರೀತಿ ಸುವದನ್ನು ಕಲಿಯುವದರಿಂದ ಸಭೆಯಲ್ಲಿ ಐಕ್ಯತೆಯನ್ನು ಕಾಪಾಡಿಕೊಂಡು ಹೋಗ ಬಹುದು. ಕ್ರಿಸ್ತನ ಐಕ್ಯತೆಯ ದೇಹದ ಒಂದು ಅಂಗವಾಗಿ ಆಗಲಿಕ್ಕೆ ನೀನು ಇತರರನ್ನು ಪ್ರೋತ್ಸಾಹಿಸಬಹುದು.

"ಐಕ್ಯವಾಗಿದ್ದರೆ ನಿಂತುಕೊಳ್ಳುವೆವು, ವಿಭಾಗವಾಗಿದ್ದರೆ ಬಿದ್ದು ಹೋಗುವೆವು" ಎಂದು ಯಾರೋ ಹೇಳಿದ್ದಾರೆ. ಐಕ್ಯತೆಯ ಮಹತ್ವವನ್ನು ನಾವೆಲ್ಲರೂ ಅರಿತು ಕೊಳ್ಳುವ ಸಮಯವಿದಾಗಿದೆ. ಬೈಬಲಿನ ವಿಧಾನದಲ್ಲಿ ಐಕ್ಯತೆಯನ್ನು ಹುಡುಕಲು ನಾವು ಪ್ರಾರಂಭಿಸುವ ಸಮಯವಿದಾಗಿದೆ. ನಾವು ಬೈಬಲಿನ ಪ್ರಕಾರ ಐಕ್ಯತೆಯಲ್ಲಿದ್ದರೆ, ನಾವು ನಿಂತುಕೊಳ್ಳುತ್ತೇವೆ. ವಿಭಾಗವಾದರೆ ನಾವು ಬಿದ್ದು ಹೋಗುತ್ತೇವೆ.

© 2009 Truth for Today